**ದಿನಾಂಕ 09.03.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನವನ್ನು ಭೋಧಿಸಲಾಯಿತು.**

**ಪಾಟೀ ಸವಾಲು : 4ನೇ ಪ್ರತಿವಾದಿ ಪರ ಶ್ರೀ. ಎಂ ಎನ್ ವಕೀಲರಿಂದಃ**

ನಾನು ವ್ಯವಸಾಯ ಮಾಡಿಕೊಂಡಿದ್ದೇನೆ. ನನ್ನ ಪ್ರಮಾಣ ಪತ್ರದಲ್ಲಿ ಇರುವುದನ್ನ ತಿಳಿದುಕೊಂಡಿದ್ದೇನೆ. ವಾದಿಯವರು ನನ್ನ ಅಣ್ಣ ತಮ್ಮಂದಿರು. ಪ್ರತಿವಾದಿಗಳು ನಮ್ಮ ಊರಿನವರು. 4ನೇ ಪ್ರತಿವಾದಿ ನಮ್ಮ ಊರಿನವರು. 4ನೇ ಪ್ರತಿವಾದಿ ವ್ಯಾಜ್ಯ ಪ್ರಾರಂಭವಾದ ನಂತರ ದಾವಾ ಸ್ವತ್ತಿನಲ್ಲಿ ಮನೆ ಕಟ್ಟಿದ್ದಾರೆ. ಪುಟ್ಟಣಯ್ಯ ಖರೀದಿ ಮಾಡುವ ಕ್ರಯ ಪತ್ರಕ್ಕೆ ನಾನು ಸಾಕ್ಷಿದಾರರನ್ನಾಗಿ ಸಹಿ ಮಾಡಿರುವುದಿಲ್ಲ. ಆಗ ನಾನು ಚಿಕ್ಕವನಾ ಇದ್ದೆ. ಆ ಕ್ರಯ ಪತ್ರವನ್ನು ನಾನು ಓದಿ ನೋಡಿರುವುದಿಲ್ಲ. ಆ ಕ್ರಯ ಪತ್ರದಲ್ಲಿ ಯಾವ ಯಾವ ಸ್ವತ್ತು ಖರೀದಿ ಮಾಡಿದ್ದಾರೆ ಎಂದರೆ 2 ಎಕರೆ ಸ್ವತ್ತು ಖರೀದಿ ಮಾಡಿದ್ದಾರೆ ಸರ್ವೆ ನಂಬರ್ ಗೊತ್ತಿಲ್ಲ. ಪುಟ್ಟಣಯ್ಯ ಮೃತ ಪಟ್ಟು ಸುಮಾರು 20 ವರ್ಷಗಳು ಆಗಿರುತ್ತದೆ, ಪುಟ್ಟಣಯ್ಯನವರಿಗೆ 7 ಜನ ಮಕ್ಕಳು, ಅವರು ಅಂಕೇಗೌಡ ದತ್ತು ಹೋಗಿದ್ದಾರೆ, ಪುಟ್ಟರಾಜಣ್ಣ, ದೇವರಾಜು, ರಾಜು, ರಾಜ, ಕೃಷ್ಣ, ಗೋಪಿ. ಪುಟ್ಟಣಯ್ಯ ರವರಿಗೆ ಹೆಣ್ಣು ಮಕ್ಕಳಿದ್ದರು. ಅವರ ಹೆಸರು ಗೊತ್ತಿಲ್ಲ. ಪುಟ್ಟಣಯ್ಯ ಮೃತ ನಂತರ ಅವರ ಮಕ್ಕಳ ನಡುವೆ ಭಾಗ ಆಗಿರುತ್ತದೆ. ದಾವಾ ಸ್ವತ್ತಿನಲ್ಲಿ 4ನೇ ಪ್ರತಿವಾದಿ ಇವಾಗ ಉಳುಮೆ ಮಾಡುತ್ತಿದ್ದಾರೆ. ನನಗೂ ವಾದಿಯವರಿಗೂ ಯಾವುದೇ ಹಣದ ವ್ಯವಹಾರ ಇರುವುದಿಲ್ಲ. ಭಾಗ ಮಾಡಿಕೊಂಡಾಗ ದಾವಾ ಸ್ವತ್ತು ಅಂಕೇಗೌಡರಿಗೆ ಹೋಗಿರುತ್ತದೆ. ಅವರ ಹೆಸರಿನಲ್ಲಿ ಯಾವುದಾದರೂ ಖಾತೆಯಾಗಿದೆಯಾ ಎಂದರೆ ಹೌದು. ಖಾತೆಯನ್ನು ನೋಡಿದ್ದಾರೆ ಎಂದರೆ ಹೌದು. ಈಗಲೂ ಅವರ ಹೆಸರಿನಲ್ಲಿ ಖಾತೆ ಇದೆಯಾ ಎಂದರೆ ಹೌದು. ಪುಟ್ಟಣಯ್ಯ ರವರು ದಾವಾ ಸ್ವತ್ತನ್ನು ಚಂದ್ರಪ್ಪ ರವರಿಂದ ಖರೀದಿ ಮಾಡಿರುತ್ತಾರೆ. ವೆಂಕಟರಾಮಯ್ಯ ಎಂದರೆ ಯಾರು ಎಂದರೆ ವೈ.ಟಿ ಹಳ್ಳಿಯವರು. ವೆಂಕಟರಾಮಯ್ಯರವರಿಗೂ ದಾವಾ ಸ್ವತ್ತಿಗೂ ಏನು ಸಂಬಂಧ ಎಂದರೆ ಅದು ಅವರ ಹಳೆಯ ಸ್ವತ್ತು. ಚಂದ್ರಪ್ಪ ನವರು ವೆಂಕಟರಾಮಯ್ಯ ನವರಿಂದ ಖರೀದಿ ಮಾಡಿದ್ದಾರೆ ಎಂದರೆ ಹೌದು. ಚಂದ್ರಪ್ಪ ಯಾವಾಗ ಖರೀದಿ ಮಾಡಿದ್ದಾರೆ ಎಂಬುದು ಗೊತ್ತಿಲ್ಲ. ದಾವಾ ಸ್ವತ್ತಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ವಾದಿಯವರಿಗೆ ಸಹಾಯ ಮಾಡಲು ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರು ಸುಳ್ಳು ಸಾಕ್ಷಿಯು ಹೇಳುತ್ತೀನೆಂದರೆ ಸುಳ್ಳು.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

(ಸಾ.ಓ.ಹೇ.ಕೇ.ಸ.ಇ.ಎ.ಒ)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.